**ಸಿಸಿ ನಂಬರಃ 3081/2024**

**ಸಾಕ್ಷಿಃ ಪಿ ಡಬ್ಲ್ಯೂಃ 1**

**(ಇಂದು ತಾಃ 15−10−2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**(ಸಾಕ್ಷಿಯ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲಾಗಿರುತ್ತದೆ)**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಎನ್.ಎನ್. ವಕೀಲರಿಂದ,**

ದೂರಿನಲ್ಲಿ ಹೇಳಿದ ಸಾಲ ಕ್ಯಾಶ್ ಕ್ರೆಡಿಟ್ ಸಾಲ ಆಗಿರುತ್ತದೆ. ದೂರಿನಲ್ಲಿ ಹೇಳಿದ ಸಾಲ ಕ್ಯಾಶ್ ಕ್ರೆಡಿಟ್ ಸಾಲವನ್ನು ಅಬ್ದುರ್ ರಶೀದ್ ಎಂಬುವವರಿಗೆ ನೀಡಿರುತ್ತೇವೆ. ಆರೋಪಿಯು ಸದ್ರಿ ಸಾಲಕ್ಕೆ ಜಾಮೀನುದಾರರಾಗಿದ್ದರು. ಮೂಲ ಸಾಲಗಾರರು ಆರೋಪಿಯ ಮಗ. ಮೂಲ ಸಾಲಗಾರರಿಂದ ಯಾವುದೇ ಚೆಕ್ಕನ್ನು ಪಡೆದಿರುವುದಿಲ್ಲ. ಆರೋಪಿಯಿಂದ ಜಾಮೀನುದಾರನಾಗಿ ಯಾವ ದಿನಾಂಕದಂದು ದಾಖಲಾತಿಗಳಿಗೆ ಸಹಿ ಪಡೆದಿರುತ್ತೇವೆಂದು ನೆನಪಿಲ್ಲ. ದೂರಿನಲ್ಲಿ ಹೇಳಿದ ಸಾಲದ ಇನ್ನೊಬ್ಬ ಜಾಮೀನುದಾರನ ಹೆಸರು ಐನೂಲ್ ಹಕ್. ಸದ್ರಿ ಜಾಮೀನುದಾರರ ತಂದೆಯ ಹೆಸರು ನೆನಪಿಲ್ಲ. ಸದ್ರಿ ಐನೂಲ್ ಹಕ್ ರವರ ತಂದೆ ಆರೋಪಿಯೇ ಆಗಿರುತ್ತಾರೆ ಎಂದರೆ ಗೊತ್ತಿಲ್ಲ.

2. ನನ್ನ ಮುಖ್ಯ ವಿಚಾರಣೆಯಲ್ಲಿ ಮೂಲ ಸಾಲಗಾರರ ತಂದೆಯ ಹೆಸರು ಮಹಮ್ಮದ್ ಅಬ್ಬಾಸ್ ಅಮೀರ್ ಶೇಖ್ ಎಂದು ಇದ್ದು, ಹಾಗೆ 1ನೇ ಜಾಮೀನುದಾರರಾದ ಐನೂಲ್ ಹಕ್ ರವರ ತಂದೆಯ ಹೆಸರು ಸಹ ಮಹಮ್ಮದ್ ಅಬ್ಬಾಸ್ ಶೇಖ್ ಎಂದು ಇದ್ದು, ಮೂಲ ಸಾಲಗಾರರು ಮತ್ತು 1ನೇ ಜಾಮೀನುದಾರರ ತಂದೆ ಒಬ್ಬರೇ ಎಂದರೆ ಗೊತ್ತಿಲ್ಲ. ನಿಪಿ−11 ಹಣ ಪಾವತಿ ರಶೀದಿಯಲ್ಲಿ ಮೂಲ ಸಾಲಗಾರರ ತಂದೆಯ ಹೆಸರು ಮಹಮ್ಮದ್ ಅಬ್ಬಾಸ್ ಶೇಖ್ ಎಂದು ಬರೆದಿರುತ್ತೇವೆ ಎಂದರೆ ಹೌದು. ಆರೋಪಿಯಿಂದ ಎಷ್ಟು ಚೆಕ್ಕುಗಳನ್ನು ಪಡೆದುಕೊಂಡಿದ್ದೀರಿ ಎಂಬ ಪ್ರಶ್ನೆಗೆ, ಸಾಕ್ಷಿಯು ಚೆಕ್ಕನ್ನು ಪಡೆದಿರುವುದಿಲ್ಲ, ಸಾಲದ ಮರುಪಾವತಿಗಾಗಿ ದೂರಿನಲ್ಲಿ ಹೇಳಿದ ಚೆಕ್ಕನ್ನು ಪಡೆದಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಿಪಿ−2 ಚೆಕ್ಕು ಅಲ್ಲದೇ ಆರೋಪಿಯು ತಾನು ಪಡೆದ ಸಾಲದ ಮರುಪಾವತಿಗಾಗಿ ಇನ್ನೊಂದು ಚೆಕ್ಕನ್ನು ನೀಡಿರುತ್ತಾರೆ. ಆರೋಪಿಯು ಚೆಕ್ಕನ್ನು ನೀಡಿದ ದಿನದಂದು ಸೊಸೈಟಿಯಲ್ಲಿರುವ ಜಾವಕ ರಜಿಸ್ಟರ್ ನಲ್ಲಿ ನಮೂದು ಮಾಡಿರುತ್ತೇವೆ. ಸದ್ರಿ ರಜಿಸ್ಟರ್ ನ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**